cheapest Daily
1 ಕಾಸು
ತಿಂಗಳಿಗೆ
ವಾರಪತ್ರಿ
ಕೆ ಸೇರಿ
4 ಆಣೆ

Regd. No. M 1299 SATYAVADI

ಸತ್ಯವಾದಿ

ಸಂಪುಟ 26] ಮಂಗಳವಾರ 29—12—1942 [ಸಂಚಿಕೆ 83

ಉತ್ತಮ ಕಾಫೀ

ಸುವಾಸನೆ! ಅತ್ಯಂತ ರುಚಿ!
ಯಾವಾಗಲೂ ಲಕ್ಷ್ಮೀನಾರಾಯಣ
ಕಾಫೀಪುಡಿಯನ್ನೇ ಉಪಯೋಗಿಸಿ.

ಲಕ್ಷ್ಮೀನಾರಾಯಣ ಕಾಫೀವರ್ಕ್ಸ್!
ಕೊಳ್ಳೇಗಾಲ

ರಷ್ಯನರ ವಿಜಯಪರಂಪರೆಗಳು

ಪಾರ್ತರಂಗ

ಬೆಂಗಳೂರು ನಗರದಲ್ಲಿ ಮುಖ್ಯ ಆಹಾರ ಪದಾರ್ಥಗಳ ರೇಷನಿಂಗ್ ಜನವರಿ 15 ರಿಂದ ಜಾರಿಗೆ ಬರುವುದೆಂದು ತಿಳಿಯಬಂದಿದೆ.

ಬೆಂಗಳೂರಿಗೆ ಬೊಂಬಾಯಿನ ಪ್ರಸಿದ್ಧ ಸಿನಿಮಾ ತಯಾರಿಕರರಾದ ಶ್ರೀ ಅಡ್ವೈ, ಸಿನಿಮಾತಾರೆ ವಸಂತಮಾಲಾ ಮತ್ತು ಡೈರೆಕ್ಟರ್ ನಾಗಭೂಷಣರವರು ಬಂದಿರುವರು

ವಿಶಾಖಾ ಪಟ್ಟಣದ ಮೇಲೆ ಏಪ್ರೆಲ್ ೬ನೆಯ ತಾರೀಖಿನ ದಿನ ಜಪಾನಿಯರು ದಾಳಿ ಮಾಡಿದಾಗಿನಿಂದ 27 ಜನ ಎಮರ್ಜನ್ಸಿ ದಳದ ಪೋಲೀಸರು ಯೋಗ್ಯ ಕಾರಣ ತೋರಿಸದೆ ಕೆಲಸ ತಪ್ಪಿಸಿರುವರೆಂದು 50 ರೂ. ಜುಲ್ಮಾನೆಯಿಂದ ಎರಡು ತಿಂಗಳ ಸಾದಾ ಸಜೆಯನ್ನು ವಿಧಿಸಿದ್ದಾರೆ.

ಭಾರತದ ಯುದ್ಧ ಕೆಲಸದಲ್ಲಿ ಯೋಗ್ಯ ಚಿಕಿತ್ಸೆಯಾಗುವ ಉದ್ದೇಶದಿಂದ ಹಿಂದುಸ್ಥಾನದಲ್ಲಿಯಿ ಡಾಕ್ಟರನ್ನು ಜುಲುಂನಿಂದ ರಣಾಂಗಣದ ಸೇವೆಗೆ ಒಯ್ಯುವ ದಕ್ಕೆಗಾಗಿ ಸರಕಾರದವರು ತಕ್ಕ ಶಾಸನಗಳನ್ನು ನಿರ್ಮಿಸಲು ತೊಡಗಿದ್ದಾರೆಂದು ತಿಳಿಯಬಂದಿದೆ.

ಲಾರ್ಡ್ ಲಿನ್‌ಲಿಥಗೋರನರ ಅವಧಿಯನ್ನು ಹೆಚ್ಚಿಸಿದ್ದನ್ನು "ಡಾನ್" ಪತ್ರಿಕೆಯು ಟೀಕಿಸಿದೆ. ಭಾರತ ರಾಜಕೀಯ ರಂಗದಲ್ಲಿದ್ದ ರೋಗ ನಿವಾರಣೆಗೆ ಮತ್ತೆ ಹೊಸ ಔಷಧವನ್ನೇ ಹಾಕಿತಲ್ಲಾ ಎಂದು ವಿಮರ್ಶಿಸಿದೆ.

ಯುದ್ಧವಾರ್ತೆ

ಎಲ್ಲಾ ಕಡೆಯಲ್ಲೂ ರಷ್ಯನರು ಜಯಶಾಲಿಗಳಾಗಿದ್ದಾರೆ. ರಷ್ಯಾ ಸೈನ್ಯವು ನಿಲರೋವನ್ನು ಸುತ್ತುಗಟ್ಟಿದೆ. ಒಂದು ಸೈನ್ಯವು ಪಟ್ಟಣವನ್ನು ಪ್ರವೇಶಿಸಿದೆ.

ಮಧ್ಯ ಡಾನ್ ರಂಗದಲ್ಲಿ ರಷ್ಯನರು ವಿಜಯಿಗಳಾಗಿದ್ದಾರೆ. ಕಳೆದು ಹೋಗಿದ್ದ ಅನೇಕ ಪಟ್ಟಣಗಳು ಪುನಃ ರಷ್ಯನರ ವಶವಾಗಿವೆ. ೧೨ ದಿನಗಳಿಂದೀಚೆಗೆ ೨೧ ಸಾವಿರ ಜರ್ಮನ್ ಸೈಲಿ ಜಾಗವನ್ನು ಜರ್ಮನರಿಂದ ಕಿತ್ತುಕೊಂಡಿರುವರು.

ಸ್ಟಾಲಿನ್‌ಗ್ರಾಡಿನ ವಾಯುವ್ಯದಲ್ಲಿ ಬೋನಿನಲ್ಲಿ ಸಿಕ್ಕಿಬಿದ್ದಂತಿರುವ ಜರ್ಮನ್ ಸೈನಿಕರ ಕಷ್ಟನಿವಾರಣೆಗಾಗಿ ಬಂದಿದ್ದ ಆರು ಜರ್ಮನ್ ಪಡೆಗಳು ಕೋಟಲ್‌ನಿಕೋವಾ ಕಡೆ ವಾಪಸ್ಸಾಗಿವೆ

ಯುನಾನಿನ ಮೇಲೆ ಜಪಾನರು ದಾಳಿ ನಡೆಸಿದರು. 80 ವಿಮಾನಗಳು ಕಾರ್ಯಾಚರಣೆಯಲ್ಲಿದ್ದವು.

ಬಿಜರ್ಟ್ ಮತ್ತು ಸ್ಫಾಕ್ಸ್‌ಗಳನ್ನು ಅಮೇರಿಕನರು ಮುತ್ತಿದ್ದಾರೆ.

ಫ್ರೆಂಚ್ ಸೋಮಾಲಿಲ್ಯಾಂಡು ಕೂಡ ಮಿತ್ರಪಕ್ಷದ ಕಡೆಗೆ ಸೇರುವ ಸಂಭವವಿರುವುದಾಗಿ ತಿಳಿಯಬಂದಿದೆ

ತಾಜಾ ಸಮಾಚಾರ

ಟರ್ಕಿಯಲ್ಲಿನ ಮುಗ್ಲಾ ಡಿಸ್ಟ್ರಿಕ್ಟಿನಲ್ಲಿ ಅದ ಮೂರನ್ನೇ ಭೂಕಂಪದಲ್ಲಿ ಮೂರು ಸಾವಿರ ಮನೆಗಳು ನಾಶವಾಯಿತು.

ಅಮೇರಿಕಾ ಪ್ರೆಸಿಡೆಂಟ್ ರೂಜ್‌ವೆಲ್ಟರ ಮಗನಿಗೆ ಬ್ರಿಟಿಷ್ ಸರಕಾರದವರು ಬಿರುದು ಕೊಟ್ಟಿದ್ದಾರೆ.

ಸಿಲ್ಚಾರ್ ಪಟ್ಟಣವಲ್ಲಿ ಆಗಸ್ಟ್ 31ರಲ್ಲಿ ಆದ ಗಲಾಟೆಗಾಗಿ ಇಲ್ಲೀವರೆಗೆ 73 ಮಂದಿ ಕಾಂಗ್ರೆಸ್‌ನವರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಗುಜರಾತಿನಲ್ಲೆಲ್ಲಾ ನಿರುದ್ಧ ಚಳವಳಿ ನಡೆಸಲು ಕಾರಣಭೂತರೆಂಬ ಆಪಾದನೆ ಮೇಲೆ ೨೪ ಮಂದಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಹೆಚ್ಚು ಬೆಳೆ ಬೆಳೆದರೆಂದು ಡಾ॥ ಟಿ. ಎಸ್. ಎಸ್. ರವರಿಗೆ ಮದರಾಸು ಸರ್ಕಾರದವರು ಬಹುಮಾನ ಕೊಟ್ಟಿದ್ದಾರೆ.

ಪಾಕಿಸ್ತಾನವನ್ನು ಪ್ರತಿಭಟಿಸಬೇಕೆಂದು, ಕಾನ್ಪುರದಲ್ಲಿ ನಡೆದ ಹಿಂದೂ ಮಹಾಸಭೆಯ 24 ನೇ ಅಧಿವೇಶನದ ಅಧ್ಯಕ್ಷ ಭಾಷಣದಲ್ಲಿ ಶ್ರೀ ಸಾವರ್ಕರರು ತಿಳಿಯಪಡಿಸಿರುವರು.

50,000,000 ಪೌಂಡು ಅಮೇರಿಕಾ ಗಿಡಗಳ ಬೀಜಗಳು ಕೇಳಲ್ಪಟ್ಟಿವೆ. ಇಂಡಿಯಾಕ್ಕೂ ಸ್ವಲ್ಪ ಬರುವುದು.

ಕಲ್ಕತ್ತಾಪಟ್ಟಣದಲ್ಲಿ 5 ನೇ ಧಾಳಿ

ನಿನ್ನೆ ಸೋಮವಾರ ಪ್ರಾತಃಕಾಲ ನಾಲ್ಕು ಘಂಟೆಯಲ್ಲಿ ಜಪಾನಿ ವಿಮಾನ ದಳವು ಕಲಕತ್ತಾ ಮೇಲೂ ಮತ್ತೊಂದು ದಳವು ಪೂರ್ವ ಬಂಗಾಳಾ ನೆಲೂ ಧಾಳಿ ಮಾಡಿದವು. ಕಲಕತ್ತಾದಲ್ಲಿ ಸಾವು ಹತ್ತಕ್ಕೆ ಮಿಾರಿಲ್ಲ. ನಷ್ಟ ಅಲ್ಪ. ಒಂದೆರಡೆ ಬೆಂಕಿ ಕಾಣಿಸಿಕೊಂಡಿತು. ತತ್‌ಕ್ಷಣ ಅದನ್ನು ಎ. ಆರ್. ಪಿ. ಯವರು ಆರಿಸಿದರು.

ಭಕ್ತಕಬೀರ್ ಚಿತ್ರಕ್ಕೆ ಟ್ಯಾಕ್ಸ್ ವಜಾ ಮಾಡಲಾಯಿತು

"ಭಕ್ತಕಬೀರ್" ಚಿತ್ರವು ರಾಷ್ಟ್ರೀಯ ಐಕ್ಯತೆ ಮತ್ತು ಸಹೋದರಾತ್ಮವನ್ನು ಬೋಧಿಸುವ ಅಮೋಘ ಸಂದೇಶದಿಂದ ಕೂಡಿರುವುದರಿಂದ ಅದಕ್ಕೆ ಸಾಧ್ಯವಾದಷ್ಟು ಪ್ರೋತ್ಸಾಹ ಮತ್ತು ಸಹಾಯ ಮಾಡಬೇಕಾದುದು ನ್ಯಾಯವಾಗಿರುವುದೆಂದು, ಬೊಂಬಾಯಿ ಸರಕಾರವು ಆ ಚಿತ್ರಕ್ಕೆ ಎಂಟರ್‌ಟೇಮೆಂಟ್ ಟ್ಯಾಕ್ಸ್ ಮನ್ನಾ ಮಾಡಿದ್ದಾರೆ.

ಹಣ್ಣಿನ ಬೀಜಗಳ ಮೇಲೆ ನಾಜಿಗಳ ಪ್ರತಿಬಂಧಕ

ಬೊಹಮಿಯ ಯೂರೇವಿಯಗಳಲ್ಲಿ ಎಲ್ಲಾ ಹಣ್ಣುಗಳ ಬೀಜಗಳನ್ನು ಶೇಖರಿಸಿ ಸರ್ಕಾರಕ್ಕೆ ಕೊಡಬೇಕೆಂದು ನಾಜಿಗಳು ಆಜ್ಞೆ ಮಾಡಿರುವರು. ಕಾರಣವೇನೆಂದರೆ ಆ ಬೀಜಗಳಿಂದ ಎಣ್ಣೆಯನ್ನು ತೆಗೆದು ಉಪಯೋಗಿಸಿಕೊಳ್ಳುವದಕ್ಕಾಗಿ. ಎಣ್ಣೆಯ ಅಭಾವವು ಜರ್ಮನಿ ಆಕ್ರಮಿತ ಸ್ಥಾನಗಳಲ್ಲಿಯೂ ಇದ್ದೇ ಇದೆಯೆಂಬುದು ಸಿದ್ಧವಾಗುವುದು.

ಜರ್ಮನ ರೇಡಿಯೋ ಹೇಳಿಕೆ ಶುದ್ಧ ಸುಳ್ಳು

ಮಿ|| ಆಂಥೋನಿ ಈಡನ್ ಮಾಸ್ಕೋಗೆ ಹೋಗಿರುವುದಾಗಿ ಜರ್ಮನ್ ರೇಡಿಯೋ ಹೇಳಿರುವುದು ಶುದ್ಧ ಸುಳ್ಳೆಂದು ಲಂಡನ್ನಿನ ಸರಕಾರಿ ಪ್ರಕಟಣೆ.

ವರ್ತಮಾನ ಸಂಗ್ರಹ

ಯುದ್ಧ ಮುಗಿದಸಂತರ ಪ್ರಪಂಚ ಸ್ಥಿತಿಯು ಯಾವ ರೀತಿ ಇರಬೇಕೆಂದು ಈಗಲೇ ಮಿತ್ರರಾಷ್ಟ್ರಗಳು ತೀರ್ಮಾನ ಮಾಡಬೇಕೆಂದು ಅಮೇರಿಕಾದಲ್ಲಿ ಶೇಕಡ 73 ಮಂದಿಯು ಅಭಿಪ್ರಾಯಪಟ್ಟಿರುವರು.

ಸಾಲಮನ್ ದ್ವೀಪದಲ್ಲಿ ಜಪಾನರು ಪ್ಯಾರಚೂಟ್ ಸೈನ್ಯವನ್ನು ಇಳಿಸುತ್ತಿರುವರು.

ನಿನ್ನೆ ಜನರಲ್ ಡಿಗಾಲ್ ರವರು ಲಂಡನ್ನಿನಿಂದ ಮೂತನಾಡುತ್ತಾ—ಜನರಲ್ ಜೆಯೋರವರು ಬಹಳ ಗಟ್ಟಿಗರೆಂದೂ, ಫ್ರೆಂಚರೆಲ್ಲರೂ ಒಂದಾಗಬೇಕೆಂದೂ, ಸೈನ್ಯವೆಲ್ಲಾ ಒಂದಾಗಿ ಕಾದಾಡಬೇಕೆಂದೂ, ನೌಕಾಗಳೆಲ್ಲಾ ಒಟ್ಟುಗೂಡಿ ಶತ್ರುಗಳನ್ನು ಬಡಿಯಬೇಕೆಂದೂ ತಿಳಿಸಿರುವರು.

ನೆನ್ನೆ ತಾ || 25 ರಲ್ಲಿ ತುರ್ಕಿಯಲ್ಲಾದ ಭೂಕಂಪದಲ್ಲಿ ಎರ್‌ಜಾನಸ್ಸಿ ಎಲ್ಲಾ ಮನೆಗಳೂ ನಾಶವಾಗಿ ನಾಲ್ಕು ಮಂತ್ರ ಉಳಿದವೆ.

ಮೆಡಿಟರೇನಿಯನ್ ಸಮುದ್ರದಲ್ಲಿ ಮಿತ್ರರಾಷ್ಟ್ರದವರೇ ತಮಗಿಂತ ಹೆಚ್ಚು ಬಾಂಬಾಳಿಗಳಾಗಿರುವರೆಂದು ಇಟಾಲಿಯನ್ನರು ಒಪ್ಪಿಕೊಂಡಿರುವರು.

ಸೂಚನೆ

ಪರಿಸ್ಥಿತಿಗೆ ತಕ್ಕಂತೆ, ಕಾಗದ ಮತ್ತು ಮುದ್ರಣಾಲಯದಲ್ಲಿನ ಅನುಕೂಲಗಳನ್ನು ಸರಿಪಡಿಸಿಕೊಳ್ಳಬೇಕಾಗಿರುವುದರಿಂದ, ನಮ್ಮ **ದಿನಪತ್ರಿಕೆ ಮಾತ್ರ** ಇನ್ನು ಒಂದು ವಾರ ಪ್ರಕಟಿಸಲ್ಪಡುವುದಿಲ್ಲ. ಚಂದಾದಾರರಿಗೆ ಹೀಗೆ ಪತ್ರಿಕೆ ಹೊರಡದಿರುವ ಕಾಲದ ಪತ್ರಿಕೆ ಮೌಲ್ಯವನ್ನು ಚಂದಾ ಹಣದಲ್ಲಿ ಕಡಮೆ ಮಾಡಲಾಗುತ್ತೆ. ವಾಚಕ ಮಹಾಶಯರ ವಿಶ್ವಾಸವು ಏಕರೀತಿಯಲ್ಲಿರಲೆಂದು ಏನಂತಿ.

ಸಂಪಾದಕ,

ತತ್ವವಿರೋಧ ಚಳವಳಿಯೆ?

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ಲಿನ ವೈಸ್-ಪ್ರೆಸಿಡೆಂಟರ ಜುನಾವಣೆಯು ಅಲ್ಲಿಯ ಕಾಂಗ್ರೆಸ್ ಪಾರ್ಟಿಯಲ್ಲಿ ಸ್ವಲ್ಪ "ತತ್ವ" ವಿರೋಧ ಚಳವಳಿ ಹೊರಟಂತಿದೆ ಈಗಾಗಲೇ ಮೂರು ಮಂದಿ ಪೌರಸಭಾ ಕಾಂಗ್ರೆಸ್ ಪಾರ್ಟಿಗೆ ರಾಜೀನಾಮೆ ಕಳುಹಿಸಿರುವುದಾಗಿಯೂ, ಅಲ್ಲಿ ಅಂಗೀಕಾರವಾದ ಮೇಲೆ ಪೌರಸಭೆಯ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವವಾಗಿಯೂ ತಿಳಿಯಬರುತ್ತೆ. ಮತ್ತೆ ಇವರು ಸ್ವತಂತ್ರರಾಗಿ ಸಭಾ ಮೆಂಬರಾಗಿ ಈಗಿನಂತೆಯೇ ಇರಬಹುದೇ ಅಥವಾ ಒಂದು ಹೊಸ ಪಾರ್ಟಿ ಉದ್ಭವಿಸುವುದೋ ನೋಡೋಣ.

(ಪುರನಿವಾಸಿ)

ಸೂರ್ಯಾಸ್ತಮಾನವಾದ ಮೇಲೆ ಕಲ್ಕತ್ತಾದ ಸೀಲ್ದಾ ರೈಲ್ವೆ ಸ್ಟೇಷನ್ನಿನಲ್ಲಿ ಬಂಗಾಳಾ ಅಸ್ಸಾಂ ರೈಲ್ವೆಯವರು ಟಿಕೆಟ್ಟುಗಳನ್ನು ಹೊಂದಿರುವಂತಹವರು ಮಾತ್ರ ಸ್ಟೇಷನ್ನಿಗೆ ಪ್ರವೇಶಿಸುವಂತೆ ಪ್ರತಿಬಂಧಿಸಿದ್ದಾರೆ.

ಶ್ರೀ ಪರಶುರಾಂಜಾಲ್
ಪ್ರೊ|| ಧೊಂಡೋಜಿರಾವ್
ಎಂಡ್ ಸನ್ಸ್
ಸಯ್ಯಾಜಿರಾವ್ ರೋಡು
ಮೈಸೂರು

ನಮ್ಮಲ್ಲಿ ಎಲ್ಲಾ ವಿಧದ ಬಟ್ಟೆಗಳೂ, ಕ್ವಲ್ಟ್‌ಗಳೂ, ಸುಲಭ ಬೆಲೆಗೆ ದೊರೆಯುತ್ತೆ. ಮತ್ತು ಹೊಲಿಗೆ ಕೆಲಸವು ನಿಮ್ಮ ಮನ ಒಪ್ಪುವಂತೆ ಅಂದವಾಗಿ ಮಾಡಲಾಗುತ್ತೆ.

ಅವೆರಾ — ರಾಧಿಕ

Edited, Printed & published by M. S. Krishna Rao, at the Satyavadi Press, Chamaraja Agrahar, Mysore.